ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೧೯ನೇ ಮಾರ್ಚ್ ೧೯೯೦, ಫಾಲ್ಗುಣ ೨೮, ೧೯೧೧ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು]

ಮನವಿ

ರೈತರ ಜಾತದ ಬಗ್ಗೆ

ಶ್ರೀ ಎ. ರುಕ್ಕಯ್ಯ ಪೂಜಾರಿ.—ನಮ್ಮ ರಾಜ್ಯದ ರೈತ, ಅನ್ನದಾತ ನಮ್ಮ ಸಮಸ್ಯೆಗಳಿಗೆ ಪರಿಹಾರ ಕೊಡಿ ಎಂದು ಇವೊತ್ತು ಇಲ್ಲಿಗೆ ಬಂದಿದ್ದಾರೆ.

ಅಧ್ಯಕ್ಷರು.—ಕಾರ್ಯಕಲಾಪ ಪಟ್ಟಿಯಲ್ಲಿ ಪ್ರಶ್ನೋತ್ತರ ಕಾಲ ಎಂದು ನಮೂದಿಸಲಾಗಿದೆ.

ಶ್ರೀ ಎ. ರುಕ್ಕಯ್ಯ ಪೂಜಾರಿ.—ಎರಡು ಲಕ್ಷ ರೈತರುಗಳು ಇಲ್ಲಿಗೆ ಜಾತಾ ಬಂದಿದ್ದಾರೆ. ಅವರ ಬಗ್ಗೆ ಮೊದಲು ಗಮನಹರಿಸಬೇಕು.

ಅಧ್ಯಕ್ಷರು.—ಪ್ರಶ್ನೋತ್ತರ ಕಾಲ ಮುಗಿಯಲಿ, ಆಮೇಲೆ, ನೀವು ರೈತ ಜಾತಾ ಬಗ್ಗೆ ಪ್ರಸ್ತಾಪ ಮಾಡಬಹುದು.

ಶ್ರೀ ಎ. ರುಕ್ಕಯ್ಯ ಪೂಜಾರಿ.—ಪ್ರತಿಯೊಬ್ಬರಿಗೂ ಅವರು ಅನ್ನದಾತರಾಗಿದ್ದಾರೆ. ಅವರ ಸಮಸ್ಯೆಗಳನ್ನು ಮೊದಲು ಪರಿಹಾರ ಮಾಡಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ.—ರೈತರ ಸಮಸ್ಯೆಗಳನ್ನು ಮುಖ್ಯ ಮಂತ್ರಿಯವರು ಕೇಳಬೇಕು. ಅವರ ಕಷ್ಟ ಸುಖಗಳಿಗೆ ಪರಿಹಾರ ಕಂಡು ಹಿಡಿಯಬೇಕು. ಅವರ ವೋಟು ತೆಗೆದುಕೊಂಡು ನೀವು ಬಂದಿದ್ದೀರಿ. ಅವರ ಸಮಸ್ಯೆಗಳನ್ನು ಪರಿಹಾರ ಮಾಡದೇ ಇದ್ದರೆ, ಉತ್ತರ ಭಾರತದಲ್ಲಿ ಏನಾಗಿದೆಯೋ ಅದೇ ರೀತಿ ನಿಮಗೂ ಆಗುತ್ತದೆ. ರೈತರುಗಳಿಗೆ ತುಂಬಾ ಅನ್ಯಾಯವಾಗುತ್ತಿದೆ. ದಯವಿಟ್ಟು ಅದರ ಬಗ್ಗೆ ಚರ್ಚೆಯಾಗಬೇಕು. ಅವರ ಗೋಳಿನ ಕಥೆಯನ್ನು ತಾವು ಕೇಳಬೇಕು. ಎರಡು ಲಕ್ಷ ರೈತರುಗಳು ಇವತ್ತು ಇಲ್ಲಿಗೆ ಬಂದಿದ್ದಾರೆ ಮಾನ್ಯ ಯಡಿಯೂರಪ್ಪನವರು ಸುಮಾರು ದಿವಸಗಳಿಂದ ಧರಣಿ ಮಾಡುತ್ತಿದ್ದರೂ ಯಾರೂ ಅದರ ಬಗ್ಗೆ ಗಮನ ಹರಿಸಿಲ್ಲ. ಈ ರೀತಿಯಾದರೆ ರಾಜ್ಯದ ರೈತರುಗಳಿಗೆ ದ್ರೋಹ ಮಾಡಿದಂತಾಗುತ್ತದೆ.

ಅಧ್ಯಕ್ಷರು.—ನಾನು ಮಾನ್ಯ ಬಿ ಎಸ್. ಆಚಾರ್ ಅವರನ್ನು ಕರೆದಿದ್ದೇನೆ. ಅವರು ತಮ್ಮ ಪ್ರಶ್ನೆಯನ್ನು ಕೇಳಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ.—ಎರಡು ಲಕ್ಷ ರೈತರು ಇಲ್ಲಿಗೆ ಬಂದಿದ್ದಾರೆ. ಅವರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದೇ ಇದ್ದರೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ರಾಜ್ಯದ ರೈತರುಗಳಿಗೆ ನೀವು ದ್ರೋಹ ಮಾಡಬೇಡಿ. ದಯವಿಟ್ಟು ಈ ಕೆಪೆ ಗಮನ ಕೊಡಿ. ರೈತರ ಸಮಸ್ಯೆಗಳನ್ನು ನೀವು ಕೇಳಬೇಕು. ಮುಖ್ಯ ಮಂತ್ರಿಯವರು ರೈತರ ಗೋಳಿನ ಕಥೆಯನ್ನು ಕೇಳಬೇಕು. ದಯವಿಟ್ಟು ರೈತರುಗಳಿಗೆ ದ್ರೋಹ ಮಾಡಬೇಡಿ. ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ರೈತರುಗಳು ಬಂದಿದ್ದಾರೆ

ಅಧ್ಯಕ್ಷರು.—ದಯವಿಟ್ಟು ತಾವುಗಳು ಕುಳಿತುಕೊಳ್ಳಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಮುಖ್ಯಮಂತ್ರಿಯವರು ರೈತರ ಬಗ್ಗೆ ಪರಿಹಾರ ಹೇಳಬೇಕು. ರೈತರು ರಾಜ್ಯದ ಎಲ್ಲೆಡೆಯಿಂದ ಬೆಂಗಳೂರಿಗೆ ಜಾತಾ ಬಂದಿದ್ದಾರೆ. ಅವರನ್ನು ಕಂಡು ಮುಖ್ಯಮಂತ್ರಿಯವರು ಅವರ ಸಮಸ್ಯೆಗಳ ಬಗ್ಗೆ ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು.—ಈ ಸಭೆಯಲ್ಲಿ ರೈತರ ವಿರೋಧಿಗಳು ಯಾರೂ ಇಲ್ಲ. ಎಲ್ಲರೂ ರೈತರ ಪರವಾಗಿಯೇ ಇದ್ದಾರೆ. ಹಾಗೆ ನೋಡಿದರೆ ನೀವೆ ರೈತರ ವಿರೋಧಿಗಳು...

ಶ್ರೀ ಕೆ. ಎಸ್. ಈಶ್ವರಪ್ಪ.—ರೈತರು ತಮ್ಮ ಊರುಗಳಿಂದ ರೊಟ್ಟಿ ಗಂಟು ಕಟ್ಟಿಕೊಂಡು ಜಾತಾ ಬಂದಿದ್ದಾರೆ. ಅವರ ಗೋಳಿನ ಬಗ್ಗೆ ಮುಖ್ಯಮಂತ್ರಿಯವರು ಕೇಳಿಕೊಂಡು ಅವರಿಗೆ ಏನಾದರೂ ಸೂಕ್ತ ಉತ್ತರವನ್ನು ಕೊಡಬೇಕು...

(ಗೊಂದಲ)

ಅಧ್ಯಕ್ಷರು.—ತಾವುಗಳು ದಯವಿಟ್ಟು ಕುಳಿತುಕೊಳ್ಳಬೇಕು. ನೀವು ಮೂರು ಜನ ಸದಸ್ಯರುಗಳು ಇಡೀ ಸರಕಾರವನ್ನು ಒತ್ತಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎ. ರಂಕ್ಯ ಪೂಜಾರಿ.—ರಾಜ್ಯದ ರೈತರುಗಳ ಗೋಳಿನ ಕಥೆ ಕೇಳಿ...

ಶ್ರೀ ಕೆ. ಎಸ್. ಈಶ್ವರಪ್ಪ.—ಅವರ ಬಗ್ಗೆ ಮುಖ್ಯಮಂತ್ರಿಯವರು ಸೂಕ್ತ ಉತ್ತರ ಹೇಳಬೇಕು.

ಅಧ್ಯಕ್ಷರು.—ಯಾವ ಕಥೆ ಕೇಳುವುದಕ್ಕೂ ಒಂದು ಇತಿಮಿತಿ ಮತ್ತು ಕಾಲ ಎಂದು ಇದೆ. ನೀವುಗಳು ಈ ಪ್ರಶ್ನೆಯನ್ನು ಆಗಾಗ ಸದನದ ಮುಂದೆ ತರುತ್ತಾ ಇದ್ದೀರಿ. ಸರಕಾರದವರೂ ತಮ್ಮ ರೆಸ್ಪಾನ್ಸ್ ಕೊಡುತ್ತಾ ಇದ್ದಾರೆ...

ಶ್ರೀ ಕೆ. ಎಸ್. ಈಶ್ವರಪ್ಪ.—ರೈತರು ಜಾತಾ ಬಂದಿದ್ದಾರೆ. ಅವರ ಬಗ್ಗೆ ಮೌನದಿಂದ ಇರುವುದು ಸರಿಯಾದ ರೆಸ್ಪಾನ್ಸ್ ಆಗುತ್ತದೆಯೇ?

ಅಧ್ಯಕ್ಷರು.—ನಾವು ಸದನದ ಕಾರ್ಯಕಲಾಪಗಳ ವ್ಯವಸ್ಥೆಯಲ್ಲಿ ಯಾವ ಯಾವ ವಿಚಾರಗಳನ್ನು ಪ್ರತಿಪಾದನೆ ಮಾಡಿದ್ದೇವೆ ಅದನ್ನು.....

ಶ್ರೀ ಕೆ. ಹೆಚ್. ರಂಗನಾಥ್.—ಈ ಘನ ಸದನದಲ್ಲಿ ಮಾನ್ಯ ಅಧ್ಯಕ್ಷರು ಎದ್ದು ನಿಂತಾಗ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು. ಇಲ್ಲದೆ ಹೋದರೆ ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಅದು ತಪ್ಪು ಮಾಡಿದ ಹಾಗೆ ಆಗುತ್ತದೆ. ಅಂಥ ತಪ್ಪುಗಳನ್ನು ಈ ಸದನವು ಗಮನಿಸಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಾವು ಯಾವ ಕಡೆ ಹೋಗುತ್ತಿದ್ದೇವೆ ಎಂದು ನನಗೆ ಅರ್ಥವಾಗುತ್ತಾ ಇಲ್ಲ. ನಾವು ಕೂಡ ಈ ಸದನದಲ್ಲಿ ೧೮ ವರ್ಷಗಳ ಕಾಲ ಕೆಲಸ ಮಾಡಿದ್ದೇವೆ. ಮಾನ್ಯ ಬಿ.ಜೆ.ಪಿ.ಯ ಸದಸ್ಯರು ಈ ಸದನದ ಸಜ್ಜನಿಕೆ, ಪರಂಪರೆಗಳನ್ನು ಅರ್ಥ ಮಾಡಿಕೊಂಡು ಕೆಲಸ ಮಾಡುತ್ತಾರೆಂದು ನಂಬಿದ್ದೇನೆ. ಅವರು ತಮ್ಮತ್ತ ಬೆರಳು ಮಾಡಿ, ತಾವುಗಳು ದ್ರೋಹ ಮಾಡಿದ್ದೀರಿ ಎಂದು ಹೇಳುತ್ತಾ ಇದ್ದಾರೆ. ಇದು ಸರಿಯೇ ?

ಶ್ರೀ ಕೆ. ಎಸ್. ಈಶ್ವರಪ್ಪ.—ನಮಗೆ ಈ ಸದನದ ಬಗ್ಗೆ, ಸದನದ ಮಾನ್ಯ ಅಧ್ಯಕ್ಷರ ಬಗ್ಗೆ ಅಪಾರ ಗೌರವ ಇದೆ, ನಾವುಗಳು ಮಾನ್ಯ ಅಧ್ಯಕ್ಷರವರನ್ನು ಕುರಿತು ಹೇಳುತ್ತಾ ಇಲ್ಲ. ಸರಕಾರದ ಕರ್ತವ್ಯವನ್ನು ಕುರಿತು ಹೇಳುತ್ತಾ ಇದ್ದೇವೆ...ಮಾನ್ಯ ಅಧ್ಯಕ್ಷರ ಬಗ್ಗೆ ನಮಗೆ ಗೌರವ ಇದೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸಂದರ್ಭದಲ್ಲಿ ನಾನು ಎದ್ದು ನಿಂತು ಮಾತನಾಡುವುದಕ್ಕೆ ಸನ್ಮಾನ್ಯ ಅಧ್ಯಕ್ಷರ ಅನುಮತಿ ಇದೆ ಎಂದು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಅನುಮತಿ ಇದೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸದನದಲ್ಲಿ ಬಿ.ಜೆ.ಪಿ.ಯ ಮಾನ್ಯ ಸದಸ್ಯರುಗಳಾಗಿರಲಿ ಅಥವಾ ಇನ್ನಾವ ಪಕ್ಷದ ಮಾನ್ಯ ಸದಸ್ಯರುಗಳೇ ಆಗಿರಲಿ, ಸದಸ್ಯರಾದವರೆಲ್ಲರೂ ಈ ಸದನದ ಮಹಾನ್ ಪರಂಪರೆಯನ್ನು ಉಳಿಸಿಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅವರುಗಳು ಮುಖ್ಯ ಮಂತ್ರಿಗಳು, ಮುಖ್ಯಮಂತ್ರಿಗಳು ಎಂದು ಹೇಳುತ್ತಾ ಇದ್ದಾರೆ. ಮುಖ್ಯಮಂತ್ರಿಯವರನ್ನು ಕುರಿತು ಮಾತನಾಡುವಾಗ ಸನ್ಮಾನ್ಯ ಮುಖ್ಯಮಂತ್ರಿಯವರು ಎಂದು ಹೇಳತಕ್ಕಂಥ ಒಂದು ಸಜ್ಜನಿಕೆ, ಒಂದು

ಔದಾರ್ಯವನ್ನೂ ಕೂಡ ತೋರಿಸದಿದ್ದರೆ ಬಹುಶಃ ಸತ್‌ಪರಂಪರೆಯನ್ನು ಗಾಳಿಗೆ ತೂರಿಕೊಂಡು ಹೋದ ಹಾಗೆ ಆಗುತ್ತದೆ...

ಶ್ರೀ ಕೆ.ಎಸ್. ಈಶ್ವರಪ್ಪ.—ತಾವುಗಳು ರೈತರ ಬಗ್ಗೆ ಗಮನ ಕೊಡದೇ ಹೋದರೆ ಅದು ಸಜ್ಜನಿಕೆ ಹೇಗೆ ಆಗುತ್ತದೆ? ರೈತರ ಗೋಳಿನ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ತಮಗೆ ಇಷ್ಟ ಇಲ್ಲವೇ? ಅವರ ಬಗ್ಗೆ ನಿಮ್ಮ ಸಜ್ಜನಿಕೆಯನ್ನು ತೋರಿಸಿ...

ಅಧ್ಯಕ್ಷರು.—ತಾವುಗಳು ಕುಳಿತುಕೊಳ್ಳಿ, ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಯವರು ಮಾತನಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ನಾವುಗಳು ಇಲ್ಲಿ ಕೆಲವು ಸತ್‌ಪರಂಪರೆಗಳನ್ನು ಬಹಳ ವರ್ಷಗಳಿಂದ ಬೆಳೆಸಿಕೊಂಡು ಬಂದಿದ್ದೇವೆ ಮತ್ತು ಎಲ್ಲರೂ ಒಪ್ಪಿಕೊಂಡಿದ್ದೇವೆ ಈ ಕಟ್ಟುಪಾಡುಗಳಿಗೆ ಅವರು ಬಹುಶಃ ಹೊಸಬರಿರಬಹುದು. ಸನ್ಮಾನ್ಯ ರುಕ್ಮಯ್ಯ ಪೂಜಾರಿಯವರು ಇಲ್ಲಿ ಹಿಂದೆ ಇದ್ದವರು, ಇಲ್ಲಿ ಕೆಲಸ ಮಾಡಿದವರು. ಅವರಾದರೂ ಅವರ ಗೆಳೆಯರಿಗೆ ಹೇಳ ಬೇಕಾಗುತ್ತದೆ. ಇವೊತ್ತು ರೈತರ ಸಮಸ್ಯೆಗಳು ಏನಿವೆ ಅವುಗಳ ಬಗ್ಗೆ ಯಾವಾಗಲೂ ಕೂಡ ನಾವು ಆಸಕ್ತಿ ವಹಿಸಿದ್ದೇವೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ.—ರೈತರ ಬಗ್ಗೆ, ಅವರ ಸಾಲದ ಬಗ್ಗೆ ಚರ್ಚೆ ಮಾಡಲು ತಯಾರಿದ್ದೀರಾ ? ಹೇಳಿ, ಆಗ ನಾವು ಕೂತುಕೊಳ್ಳುತ್ತೇವೆ. ಮುಖ್ಯಮಂತ್ರಿಗಳು ಕೂಡ ಹಿಂದೆ ಭರವಸೆ ನೀಡಿದ್ದರು. ಹಾಗೆ ಈಗ ನಡೆದುಕೊಂಡರೆ ಬಹಳ ಸಂತೋಷ. ಬದಲಿಗೆ ರೈತರಿಗೆ ದ್ರೋಹ ಮಾಡಹೋದರೆ ತಪ್ಪಾಗುತ್ತದೆ.

ಅಧ್ಯಕ್ಷರು.—ಪ್ರಶ್ನೋತ್ತರ ಕಾಲ ಮುಗಿದ ಮೇಲೆ ನೀವು ಪ್ರಸ್ತಾಪ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ.—ಯಾವ ಪ್ರಶ್ನೋತ್ತರ ಸ್ವಾಮಿ, ಅದನ್ನು ತೆಗೆದುಕೊಂಡು ಏನು ಮಾಡ್ತಿರಿ ? ಬೆಂಕಿ ಹಾಕಿ ಅದಕ್ಕೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ರೈತರ ಬಗ್ಗೆ ಇವರಿಗೆ ಇದುವರೆಗೂ ಇಲ್ಲದಿದ್ದ ಕಳಕಳಿ ನೋಡಿದರೆ ಆಶ್ಚರ್ಯವಾಗುತ್ತದೆ. ಹಿಂದೆಯೆಲ್ಲಾ ಭೂ ಶಾಸನ ಅನುಷ್ಠಾನ ಮಾಡುವಾಗ ಭೂ ಮಾಲೀಕರ ಪರವಾಗಿ ಯಾರು ಇದ್ದರೆಂದು ನಮಗೆ ಗೊತ್ತಿದೆ. ಇಲ್ಲಿಯವರೆಗೂ ಇಲ್ಲದ ಮೊಸಳೆ ಕಣ್ಣೀರು ಈಗ ಏಕೆ ಬೇಕು?

(ಗದ್ದಲ)

ಅದಕ್ಕಾಗಿ ಸದನದ ಕಾರ್ಯ ಕಲಾಪಗಳನ್ನು ಬಲಿಕೊಡುವುದು ಏಕೆ ? ಸನ್ಮಾನ್ಯ ಮುಖ್ಯ ಮಂತ್ರಿಗಳೂ ಚರ್ಚೆ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಈ ಬಗ್ಗೆ, ಒಂದು ಸೂಚನೆಯನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಯಾವುದೇ ಕಾರಣಕ್ಕಾಗಿ ಪ್ರಶ್ನೋತ್ತರ ಗಳಾಲದಲ್ಲಿದ್ದಲು ಉಂಟಾ ಮಾಡುವುದು ಬೇಡ.

ಶ್ರೀ ಕೆ ಎಸ್. ಈಶ್ವರಪ್ಪ.—ರೈತರ ಬಗ್ಗೆ ತೋರುತ್ತಿರುವ ನಿರ್ಲಕ್ಷತನವನ್ನು ಪ್ರತಿಭಟಿಸಿ ಧರಣಿ ಕೂರುತ್ತೇವೆ.

(ಧರಣಿ ಪ್ರವೇಶ)

ಉತ್ತರ ಭಾರತದಲ್ಲಿ ಹೀಗೆ ಉದ್ದಟತನ ತೋರಿದ್ದಕ್ಕೆ ನಿಮ್ಮನ್ನು ಮನೆಗೆ ಕಳಿಸಿದ್ದಾರೆ. ಜ್ಞಾಪಕ ಇಟ್ಟುಕೊಳ್ಳಿ. ರಾಜ್ಯ ಸರ್ಕಾರಕ್ಕೂ ಇದೇ ಎಚ್ಚರಿಕೆ ಇಲ್ಲಿ ಬರೀ ಮೂರು ಜನ ಇರಬಹುದು. ಅಲ್ಲಿ ೮೫ ಮಂದಿ ಇದ್ದೇವೆಂಬುದನ್ನು ಮರೆಯಬೇಡಿ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು ಆಶ್ವಾಸನೆ ನೀಡಬೇಕು. ಇಡೀ ರಾಜ್ಯದಿಂದ ರೊಟ್ಟಿ ಕಟ್ಟಿಕೊಂಡು ರೈತರು ಬಾಧೆ ಬಂದಿದ್ದಾರೆ. ಅವರಿಗೆ ನಿರಾಸೆ ಮಾಡಬೇಡಿ. ಇಲ್ಲದೇ ಹೋದರೆ ಮುಖ್ಯಮಂತ್ರಿಗಳು ರೈತರ ಬಗ್ಗೆ ತಾವು ಗಮನ ಕೊಡುವುದಿಲ್ಲವೆಂದು ಹೇಳಿಬಿಡಲಿ, ನಾವು ಸುಮ್ಮನೆ ಹೊರಟು ಹೋಗುತ್ತೇವೆ.

(ಧರಣಿ ಕೂತಿದ್ದ ಸದಸ್ಯರು ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ, ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ, ಉತ್ತರ ಭಾಗತದ ಚಿಂತನಾವಣೆಗಳಂ ನಿಮಗೆ ಎಚ್ಚರಿಕೆ ಎಂದು ಕೂಗುತ್ತ ಸದನದಿಂದ ನಿರ್ಗಮಿಸುವರು.)